ಶ್ರೀ ಯು. ಆರ್. ಸಭಾಪತಿ: ಸನ್ಮಾನ್ಯ ಅಧ್ಯಕ್ಷರೆ, ತಾವು ಒಂದು ಸಲ ರೂಲಿಂಗ್‌ನ್ನು ಕೊಟ್ಟ ಮೇಲೆ ವಿರೋಧಪಕ್ಷದ ನಾಯಕರೆಲ್ಲಾ ಈ ರೀತಿಯಾಗಿ ಮಾತನಾಡುತ್ತಿರುವುದನ್ನು ನೋಡಿದರೆ, ಇವರಿಗೆ ಸದನದ ಮೇಲೆ ಗೌರವವಿಲ್ಲವೆಂದು ನಾನು ಹೇಳಬಯಸುತ್ತೇನೆ. ಮಾನ್ಯ ರಾಜ್ಯಪಾಲರ ಮೇಲೆ ಗೌರವವಿಲ್ಲವೆಂದು ನಾನು ಹೇಳಬಯಸುತ್ತೇನೆ. ಮಾನ್ಯ ರಾಜ್ಯಪಾಲರ ಮೇಲೆ ಗೌರವವಿಲ್ಲವೆಂದು ಹೇಳಬಯಸುತ್ತೇನೆ, ಈ ರಾಜ್ಯದ ಜನತೆಯ ಬಗ್ಗೆ ಯಾವುದೇ ಕಳಕಳಿ ಇಲ್ಲ, ಸದನದ ಕಾರ್ಯಕಲಾಪಕ್ಕೆ ಅಡಚಣೆಯನ್ನುಂಟು ಮಾಡಲು ಪ್ರಯತ್ನಪಡುತ್ತಿರುವ ವಿರೋಧಪಕ್ಷದವರೆಂದು ಹೇಳಬಯಸುತ್ತೇನೆ.

ಅಧ್ಯಕ್ಷರು: ಮಾನ್ಯ ವೈ. ಕೆ. ರಾಮಯ್ಯನವರೆ ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾ ಪ್ರಸ್ತಾವವನ್ನು ಓದಿ.

4. ರಾಜ್ಯಪಾಲರ ಭಾಷಣಕ್ಕೆ ಸಲ್ಲಿಸತಕ್ಕ ವಂದನಾ ನಿರ್ಣಯದ ಮಂಡನೆ.

+ ಶ್ರೀ ವೈ.ಕೆ. ರಾಮಯ್ಯ (ಹುಲಿಯೂರುದುರ್ಗ) : ಮಾನ್ಯ ಅಧ್ಯಕ್ಷರೆ, ನಾನು ಈ ಕೆಳಕಂಡ ಪ್ರಸ್ತಾವವನ್ನು ಮಂಡಿಸಲು ತಮ್ಮ ಅನುಮತಿಯನ್ನು ಕೋರುತ್ತೇನೆ.

" 2001 ರ ಫೆಬ್ರವರಿ 26 ರಂದು ವಿಧಾನಮಂಡಲದ ಸದಸ್ಯರನ್ನುದ್ದೇಶಿಸಿ ದಯಪಾಲಿಸಿದ ಭಾಷಣಕ್ಕಾಗಿ ಈ ಅಧಿವೇಶನದಲ್ಲಿ ಸೇರಿರುವ ವಿಧಾನಸಭೆಯ ಸದಸ್ಯರಾದ ನಾವು ರಾಜ್ಯಪಾಲರಿಗೆ ಕೃತಜ್ಞತಾಪೂರ್ವಕವಾದ ವಂದನೆಗಳನ್ನು ಸಮರ್ಪಿಸುತ್ತೇವೆ.

ಶ್ರೀ ಯು. ಆರ್. ಸಭಾಪತಿ (ಉಡುಪಿ) : ಮಾನ್ಯ ಅಧ್ಯಕ್ಷರೆ, ನಾನು ಈ ಪ್ರಸ್ತಾವವನ್ನು ಅನುಮೋದಿಸುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು.

(ಗೊಂದಲ)

Mr. SPEAKER : I cannot revise my ruling. ಮೂವ್ ಆಗಿದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಗೃಹಸಚಿವರು) : ಮಾನ್ಯ ಅಧ್ಯಕ್ಷರೆ, ಚರ್ಚೆಗೆ ಅವಕಾಶವನ್ನು ಮಾಡಿಕೊಟ್ಟರೂ ವಿರೋಧಪಕ್ಷದವರು ಒಪ್ಪುವುದಿಲ್ಲವೆಂದರೆ ಹೇಗೆ? ನೀವೇನಾದರೂ ಅವಮಾನ ಮಾಡಿದರೆ ಆ ಮಾತು ಬೇರೆ.

ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೆ, ತಾವು ದಯವಿಟ್ಟು ನಮ್ಮ ರಕ್ಷಣೆಗೆ ಬರಬೇಕು. ಬೆಳಿಗ್ಗೆ ಏನಾಯಿತು. ಎಂಬುದರ ಬಗ್ಗೆ ತಾವು ಗಮನಹರಿಸಬೇಕು.

Mr. SPEAKER : I have allowed Mr.Ramaiah to speak for half an hour.

ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರ ರೂಲಿಂಗ್‌ನ್ನು ಮಾನ್ಯ ವಿರೋಧಪಕ್ಷದ ನಾಯಕರೆ ಪ್ರಶ್ನೆ ಮಾಡುತ್ತಿದ್ದೀರಾ?

ಶ್ರೀ ಜಗದೀಶ್ ಶೆಟ್ಟರ್ : ಇಲ್ಲಿ ಎರಡು ರೂಲಿಂಗ್ ಇದ್ದಾವೆ.

ಶ್ರೀ ಡಿ.ಬಿ. ಚಂದ್ರೇಗೌಡ: ಇಲ್ಲ, ಇಲ್ಲಿ ಒಂದೇ ಒಂದು ರೂಲಿಂಗ್ ಇದೆ.

ಶ್ರೀ ಜಗದೀಶ್ ಶೆಟ್ಟರ್: ಸನ್ಮಾನ್ಯ ಅಧ್ಯಕ್ಷರೆ, ತಾವು ಬೆಳಿಗ್ಗೆ ಒಂದು ರೂಲಿಂಗ್‌ನ್ನು ಕೊಟ್ಟಿದ್ದೀರಿ. ಪ್ರಿಲಿಮಿನರಿ ಸಬ್‌ಮಿಟ್ ಮಾಡಿ ಎಂದು ತಾವು ಹೇಳಿದ್ದೀರಿ. ಮಾನ್ಯ ರಂಗನಾಥ್‌ರವರು, ಮಾನ್ಯ ಚಂದ್ರೇಗೌಡರು ಇದ್ದರು, ಆಮೇಲೆ ಸೆಕೆಂಡ್ ರೂಲಿಂಗ್‌ನ್ನು ಕೊಟ್ಟಿದ್ದೀರಿ. ಈಗ ತಾವು ಪುನರ್‌ಪರಿಶೀಲನೆ ಮಾಡಿ ಎಂದು ನಾವು ವಿನಂತಿ ಮಾಡಿಕೊಳ್ಳುತ್ತಿದ್ದೇವೆ. ಇಲ್ಲಿ ಎರಡು ರೂಲಿಂಗ್ ಇದ್ದಾವೆ.

ಅಧ್ಯಕ್ಷರು: ಮಾನ್ಯ ವಿರೋಧಪಕ್ಷದ ನಾಯಕರೆ, ಈ ಸಭೆಯನ್ನು ನಡೆಯುವುದಕ್ಕೆ ಬಿಡುತ್ತೀರೋ ಅಥವಾ ಇಲ್ಲವೋ ಅಷ್ಟು ಹೇಳಿ. ಅವರು ಭಾಷಣವನ್ನು ಮಾಡುವುದಕ್ಕೆ ಅವಕಾಶವನ್ನು ಕೊಡುತ್ತಿರೋ ಹೇಗೆ?

ಶ್ರೀ ಡಿ.ವಿ. ಸದಾನಂದಗೌಡ: ಮಾನ್ಯ ಅಧ್ಯಕ್ಷರೆ ಇಲ್ಲೊಂದು ಪ್ರಶ್ನೆ ಇದೆ. ತಮ್ಮ ಅಧ್ಯಕ್ಷರ ಸ್ಥಾನಕ್ಕೆ ನಮ್ಮ ಪೂರ್ತಿ ಗೌರವವಿದೆ. ತಮ್ಮ ತೀರ್ಪಿಗೆ ಎರಡನೇ ಮಾತಿಲ್ಲ.

(ಗೊಂದಲ)

ಅಧ್ಯಕ್ಷರು: ತಾವು ಸಭೆಯನ್ನು ನಡೆಸುವುದಕ್ಕೆ ಮಾರ್ಗದರ್ಶನ ಮಾಡದೇ ಇದ್ದರೆ ನಾನು ಸಭೆಯನ್ನು ಮುಂದೂಡಬೇಕಾಗುತ್ತದೆ. ಈಗಾಗಲೇ ಮಾನ್ಯ ವೈ.ಕೆ.ರಾಮಯ್ಯನವರು ರಾಜ್ಯಪಾಲರ ಭಾಷಣದ ಮೇಲೆ ವಂದನಾ ನಿರ್ಣಯವನ್ನು ಮೂವ್ ಮಾಡಿದ್ದಾರೆ, ಮಾನ್ಯ ಯು.ಆರ್. ಸಭಾಪತಿಯವರು ಅದನ್ನು ಅನುಮೋದಿಸಿದ್ದಾರೆ. ಅರ್ಧ ಗಂಟೆ ತಡೆಯಿರಿ, ನಂತರ ನೀವೇ ಇದೇ ವಿಷಯದ ಮೇಲೆ ಮಾತನಾಡಿ, ನನ್ನದೇನೂ ಅಭ್ಯಂತರವಿಲ್ಲ.

(ಗೊಂದಲ)

ಅಧ್ಯಕ್ಷರು: ಇಲ್ಲಿ ಸಭೆಯನ್ನು ನಡೆಸಲು ನಮಗೆ ಅವರು ಮಾರ್ಗದರ್ಶನ ಕೊಡದೇ ಇರುವುದರಿಂದ. I will adjourn the House and it will meet again at 3 O'Clock.

(ಸದನವು 1 ಗಂಟೆ 25 ನಿಮಿಷಕ್ಕೆ ಮುಕ್ತಾಯಗೊಂಡು ಮತ್ತೆ 3-00 ಗಂಟೆಗೆ ಸಮಾವೇಶಗೊಳ್ಳುವುದು)

(ಸಭೆಯು ಪುನಃ ಮಧ್ಯಾಹ್ನ 3. 10 ಗಂಟೆಗೆ ಸಮಾವೇಶಗೊಂಡಿತು)

(ಅಧ್ಯಕ್ಷರು ಪೀಠದಲ್ಲಿದ್ದರು)

ನಿಲುವಳಿ ಸೂಚನೆಗೆ ಅನುಮತಿ ಕೋರಿ ಚರ್ಚೆ

ವಿಷಯ: ವಿದ್ಯುತ್ ದರ ಹೆಚ್ಚಳ ಹಾಗೂ ವಿತರಣೆ ಬಗ್ಗೆ

+ ಶ್ರೀ ಡಿ.ವಿ. ಸದಾನಂದ ಗೌಡ: ಮಾನ್ಯ ಅಧ್ಯಕ್ಷರೆ, ತಮ್ಮಲ್ಲಿ ಪದೇ ಪದೇ ನಾವು ವಿನಂತಿ ಮಾಡಿಕೊಳ್ಳುತ್ತಿದ್ದೇವೆ. ಅದೇನೆಂದರೆ ಬೆಳಿಗ್ಗೆ ತಮ್ಮ ತೀರ್ಮಾನಕ್ಕೆ ಗೌರವ ಕೊಟ್ಟು ಮೊದಲಿನಿಂದಲೂ